ಶ್ರೀ ವೈ. ರಾಮಕೃಷ್ಣ.—ತೆರಿಗೆಯನ್ನು ವಸೂಲು ಮಾಡತಕ್ಕಂಥದ್ದು ಮಾರ್ಕೆಟ್ ಸೌಲಭ್ಯ ಗಳನ್ನು ಒದಗಿಸುವುದೇ ಮೂಲ ಉದ್ದೇಶವಾಗಿರುತ್ತದೆ,

ಶ್ರೀ ಡಿ. ಟಿ. ಮಾಯಣ್ಣ.—ಸೆಂತೆ ಮಾವತ್ತೂರುನಲ್ಲಿ ಮಾರ್ಕೆಟ್ ಕಟ್ಟಲು ಸೈಟನ್ನು ಕೊಟ್ಟು ಎಷ್ಟೋ ದಿವಸಗಳಾಗಿದ್ದರೂ ಇದುವರೆಗೂ ಏತಕ್ಕೆ ತೆಗೆದುಕೊಂಡಿಲ್ಲವೆಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸಂತೆ ಮಾವತ್ತೂರು, ಹುಲಿಯೂರು ದುರ್ಗ, ಕುದೂರು, ಈ ಮೂರು ಪ್ರದೇಶಗಳಲ್ಲಿ ಸೈಟ್ಸ್‌ಗಳು ಸಿಕ್ಕಿರುವುದರಿಂದ ಮಾರ್ಕೆಟ್ ಕಟ್ಟುವುದಕ್ಕೆ ಈ ವರ್ಷದ ಕಾರ್ಯಕ್ರಮದಲ್ಲಿ ಹಾಕಿಕೊಂಡಿದ್ದೇವೆ. ಉಳಿದ ಐದು ಕಡೆಗಳಲ್ಲಿ ಸೈಟ್ಸ್‌ಗಳು ಸಿಕ್ಕಿಲ್ಲ. ಅಲ್ಲೂ ಕೂಡ ಮಾರ್ಕೆಟ್ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಬಿತ್ತನೆ ಬೆಳೆಯತಕ್ಕಂಥ ರೈತರಿಗೆ ಇಷ್ಟೇ ಬೆಲೆಗೆ ಕೊಡಬೇಕೆಂದು ನಿರ್ಬಂದ ಮಾಡುತ್ತಾರೆ. ಇದರ ಬಗ್ಗೆ ಎನ್‌ಕ್ವಯರಿ ಮಾಡಬೇಕು. ಕೆಲವು ಮಾರ್ಕೆಟ್‌ಗಳಲ್ಲಿ ಬೇಸಿಗೆ ಕಾಲದಲ್ಲಿ ಜಾಸ್ತಿ ಬೆಳೆಯಾಗಿ, ಮಳೆಗಾಲದಲ್ಲಿ ಕಡಿಮೆ ಬೆಳೆಯಾಗುತ್ತದೆ. ಹಾಗೆಯೇ ರೇಟ್ಸ್ ಕೂಡ ನಿಮ್ಮ ಅಧಿಕಾರಿಗಳು ಬೆಲೆಯನ್ನು ಮನಸೋ ಇಚ್ಛೆ ನಿಗದಿ ಮಾಡುತ್ತಾರೆ. ರೈತರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇಷ್ಟೇ ಬೆಲೆಗೆ ಕೊಂಡುಕೊಳ್ಳಬೇಕೆಂದು ನಿಗದಿ ಮಾಡಬೇಕಂ ಮತ್ತು ಈ ರೀತಿ ವರ್ತನೆ ಮಾಡಿದಂಥ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ವಿಚಾರಿಸು ತ್ತೀರಾ ಎಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಾಗ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ಹಿಂದೆ ಇಂಥದೇ ಪ್ರಕರಣ ನಡೆದಾಗ ಕ್ರಮ ತೆಗೆದುಕೊಂಡು ಎರಡು ಇನ್‌ಕ್ರಿಮೆಂಟ್ ಕೂಡ ನಿಲ್ಲಿಸಿದ್ದೇವೆ. ಸಿರಿಕಲ್ಚರ್ ಇನ್‌ಸ್ಪೆಕ್ಟರ್ ಮತ್ತು ಡೆಮಾನ್‌ಸ್ಟ್ರೇಟರ್ ಮೇಲೆ ಕ್ರಮ ತೆಗೆದುಕೊಂಡು ಸಸ್‌ಪೆಂಡ್ ಮಾಡಿ ಎನ್‌ಕ್ವಯರಿಯನ್ನೂ ಕೂಡ ಗೊತ್ತುಮಾಡಿದ್ದೇವೆ. ಇದೇರೀತಿ ಕಕೂನ್ ವೆಯ್ಕರನ್ನೂ ಕೂಡ ಸಸ್‌ಪೆಂಡ್ ಮಾಡಿದ್ದೇವೆ. ಆರೋಪ ಬಂದವರ ಮೇಲೆ ಕ್ರಮ ತೆಗೆದು ಕೊಳ್ಳಲು ಸರ್ಕಾರ ಸದಾ ಸಿದ್ದವಾಗಿಯೇ ಇದೆ ಎಂದು ಹೇಳುತ್ತೇನೆ.

Sticking of wall posters.

638 SRI K. RAMBHAT (Puttur)—Will the Minister for Housing & Urban Development be pleased to state :—

(a) whether it has come to the notice of Government that though the rules are in force prohibiting sticking of wall posters on the walls of Government and public buildings, there is violation of these rules in Bangalore City;

(b) whether the Government have accorded permission to stick posters on the walls regarding "Anti-dowry" Programmes dated 29-30/12/1981 of the Youth Congress at Bangalore and the programmes of 4-1-82 of Mrs. Indira Gandhi, Prime Minist Vidhana Soudha;

(c) what are the measures to be undertaken by the Government on those who are held responsible if the posters are displayed without permission ?

SRI DHARAM SINGH (Minister for Housing & Urban Development).–

(a) Yes.

(b) No.

(c) Action will be taken in accordance with the Rules.

ಶ್ರೀ ಕೆ. ರಾಮಭಟ್.—ಕಾನೂನು ಉಲ್ಲಂಘನೆ ಮಾಡಿರತಕ್ಕಂಥದ್ದು ತಪ್ಪು ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಮೂರು ಪ್ರಕರಣಗಳಲ್ಲಿ ಕಾನೂನು ಉಲ್ಲಂಘನೆ ಮಾಡಿರತಕ್ಕಂಥ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ತಿಳಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಎಲ್ಲೆಲ್ಲಿ ಕಾನೂನು ಉಲ್ಲಂಘನೆ ಮಾಡಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡು ೧೯೮೧ ರಲ್ಲಿ ಒಂದು ಆರ್ಡಿನೆನ್ಸ್‌ನ್ನು ಪೋರಡಿಸಿ ೫-೫-೮೧ ರಲ್ಲಿ ಬಿಲ್ ಪಾಸ್ ಮಾಡಿ ರಾಷ್ಟ್ರಪತಿಯವರ ಅಸೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅವರು ಬರುವ ವರೆಗೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಕಾಯುತ್ತಿದ್ದೇನೆ. ಒಪ್ಪಿಗೆ ಬಂದನಂತರ ಈ ರೀತಿಯಾದ ಪ್ರಕರಣಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ರಾಮಭಟ್.—ಮಾನ್ಯ ಸಭಾಪತಿಯವರೇ ಹಿಂದೆ ಇಂಥದೇ ಪ್ರಕರಣಗಳಲ್ಲಿ ಮುನಿಸಿಪಾಲಿಟಿಯವರು, ಕಾರ್ಪೊರೇಷನ್‌ನವರು ಮೊಕದ್ದಮೆಗಳನ್ನು ಮಾಡಿ ೨೦೦ರೂಪಾಯಿಗಳ ವರೆಗೆ ದಂಡವನ್ನು ಹಾಕಿದ್ದಾರೆ. ಇದು ಜಾರಿಯಲ್ಲಿ ಇದೆ ಆದರೆ ಈ ಮೂರು ಪ್ರಕರಣಗಳಲ್ಲಿ ಯುವ ಕಾಂಗ್ರೆಸ್ಸಿನ ಪರದಕ್ಷಿಣೆ ವಿರೋಧ ಮತ್ತು ಯುವ ಕಾಂಗ್ರೆಸ್‌ನ ತಾ ೨೯/೩೦-೧೨-೧೯೮೧ ಬೆಂಗಳೂರು ಕಾರ್ಯಕ್ರಮಗಳ ಮತ್ತು ತಾಳಿ-೧-೮೨ರ ಇಂದಿರಾಗಾಂಧಿಯವರ ವಿಧಾನ ಸೌಧಾಕ್ಕೆ ಒರತಕ್ಕಂಥ ಕಾರ್ಯಕ್ರಮಗಳ ಭಿತ್ತಿ ಪತ್ರಗಳನ್ನು ಅಚ್ಚು ಹಾಕಿ ಹಂಚಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು. ಈ ಮೂರು ಪ್ರಕರಣಗಳಲ್ಲೂ ಯಾರ್ಯಾರು ಜವಾಬ್ದಾರರೆಂದು ತಿಳಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಸಭಾಧ್ಯಕ್ಷರೇ ಈ ರೀತಿ ಕಾರ್ಯಗಳು ಆಗಬಾರದು, ಇದನ್ನು ತಡೆಗಟ್ಟಬೇಕು ಎನ್ನುವ ದೃಷ್ಟಿಯಿಂದ ಮೊಟ್ಟ ಮೊದಲನೆಯದಾಗಿ ಈ ರೀತಿ ಒಂದು ಬಿಲ್ ಪಾಸ್ ಮಾಡಿ ರಾಷ್ಟ್ರಪತಿಯವರಿಗೆ ಕಳುಹಿಸಿಕೊಟ್ಟಿದ್ದೇವೆ. ಸ್ವಲ್ಪ ತಡವಾಗಬಹುದು. ಕಾನೂನು ಉಲ್ಲಂಘನೆ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಯತ್ನಮಾಡಿ ತೀವ್ರವಾಗಿ ಮುಂದೆ ಈ ರೀತಿ ಆಗದಂತೆ ಇದನ್ನು ತಡಗಟ್ಟಬೇಕಾದರೆ ಸ್ವಲ್ಪ ಸಮಯಬೇಕಾಗುತ್ತದೆ.

ಶ್ರೀ ಕೆ. ರಾಮಭಟ್.—ಶ್ರೀಮತಿ ಇಂದಿರಾಗಾಂಧಿಯವರು ವಿಧಾನಸೌಧಕ್ಕೆ ಬರುತ್ತಾರೆಂದು ಅಚ್ಚು ಹಾಕಿಸಿ ಗೋಡೆಗಳ ಮೇಲೆ ಹಚ್ಚಿದ್ದಾರೆ. ಈ ಪ್ರಕರಣ ಯಾರು ಮಾಡಿದ್ದಾರೆಂಬುದನ್ನು ತಿಳಿಯಬೇಕಾಗಿದೆ. ಮತ್ತು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ರಾಮಾಭಟ್ಟರೆ ಸದಸ್ಯರು ಯಾರು ಇಂಥ ಪೋಸ್ಟರ್ ಹಚ್ಚುವ ಕೆಲಸಕ್ಕೆ ಹೋಗುತ್ತಾರೆ ? ಯಾರೂ ಈ ರೀತಿ ಪಬ್ಲಿಷ್ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರಿರ್.—ತಾವು ಇಂತದಕ್ಕೆ ತಡೆ ಹಾಕಿದರೂ ಮುಂದೆ ಚುನಾವಣೆಗಳು ಬರುವುದು ಇರುತ್ತದೆ. ಬಿತ್ತಿಪತ್ರಗಳನ್ನು ಹಾಕಬೇಕಾಗುತ್ತದೆ. ಅದಕ್ಕೆ ಏನಾದರೂ ನಿಯಮಗಳನ್ನು ಮಾಡುತ್ತೀರಾ ? ಇಂಥ ಸ್ಥಳಗಳಲ್ಲಿಯೇ ಬಿತ್ತಿಪತ್ರಗಳನ್ನು ಹಚ್ಚಬೇಕೆಂದು ನಿಯಮಾವಳಿಯನ್ನು ಏನಾದರೂ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಕಾರ್ಪೊರೇಷನ್ ಆಕ್ಟ್ ಪ್ರಕಾರವಾಗಿ ಪೋಸ್ಟರ್ಸ್ ಹಚ್ಚಬೇಕಾದರೆ ಸ್ಟ್ಯಾಂಪ್ ಹಚ್ಚಿ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಮತ್ತು ಈ ರೀತಿ ಪೋಸ್ಟರ್ ಹಚ್ಚಬೇಕಾದಕೆ ಎಲ್ಲೆಲ್ಲಿ ಹಾಕಬೇಕು ಎನ್ನುವ ಬಗ್ಗೆಯೂ ಕಂಡಿಷ್ಟ್ರಿಕ್ಷನ್ ಇರುತ್ತದೆ.

ಶ್ರೀ ಕಾಪು ಸಂಜೀವ ಶೆಟ್ಟಿ.—ಕಾನೂನು ಇದ್ದರೂ ಕೂಡ ಕಾನೂನನ್ನು ಉಲ್ಲಂಘನೆ ಮಾಡಿ ಈ ರೀತಿ ಪೋಸ್ಟರ್ಸ್‌ಗಳನ್ನು ಹಚ್ಚುತ್ತಿರುತ್ತಾರೆ. ಹೊಸ ಹೊಸ ಪಾರ್ಟಿಗಳವರು ಮತ್ತು ಇತರೇ

ಪಾರ್ಟಿಗಳವರು ಇರುತ್ತದೆ. ಇದನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಈ ರೀತಿ ಮಾಡುವುದು ಸರಿಯೇ ಎಂದು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.--ಈಗ ಕಾಪು ಸಂಜೀವಶೆಟ್ಟರು ಒಳ್ಳೆಯ ಯಕ್ಷಗಾನದ ತರಹ ಹೇಳ ತ್ತಿದ್ದಾರೆ. ನಮ್ಮ ಪಾರ್ಟಿಯವರೇ ಇದನ್ನು ಮಾಡುತ್ತಿರುವ ರೀತಿಯಲ್ಲಿ ಹೇಳಿದ್ದಾರೆ. ನಾನು ಕೇಳ ತ್ತೇನೆ, ಈ ರೀತಿ ಗೋಡೆಗಳ ಮೇಲೆ ಬರೆದವರನ್ನು ತಾವು ಹಿಡಿದಿದ್ದೀರಾ ? ಅವರನ್ನು ಶಿಕ್ಷೆಗೆ ಗುರಿಪಡಿ ಸಿದ್ದೀರಾ ? ಗೋಕಾಕ್ ವರದಿ ಸಂಬಂಧವಾಗಿಯೂ ಗೊಡೆಗಳ ಮೇಲೆ ಬರೆದಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ? ಯಾವ ಪಾರ್ಟಿಯವರು ಈ ರೀತಿ ಮಾಡುತ್ತಾರೆಂಬುದು ತಮಗೆ ಗೊತ್ತಿಲ್ಲವೇ ? ಇಂಥಾದ್ದನ್ನು ಯಾರು ಹೆಚ್ಚಾಗಿ ಮಾಡುತ್ತಿದ್ದಾರೋ ಅವರನ್ನು ಹದ್ದುಬಸ್ತಿನಲ್ಲಿಡುತ್ತೀರಾ ?

ಶ್ರೀ ಧರ್ಮಸಿಂಗ್.--ನಾನು ಈಗಾಗಲೇ ಹೇಳಿದ್ದೇನೆ. ಈ ತರಹ ಯಾರು ಮಾಡುತ್ತಾರೋ ಅವರಿಗೆ ಒಂದು ವರ್ಷದ ಶಿಕ್ಷೆ ಮತ್ತು ದಂಡ ಎರಡನ್ನು ವಿಧಿಸಲು ಈ ಬಿಲ್‌ನಲ್ಲಿ ಅವಕಾಶವಿದೆ. ಮೊದಲು ಆರ್ಡಿನೆನ್ಸ್ ಹೊರಡಿಸಲಾಗಿತ್ತು. ನಂತರ ಇದರ ಜಾಗದಲ್ಲಿ ಬಿಲ್ ತಂದು ಪಾಸ್ ಮಾಡಿದೆ. ಆದರೆ ಇದಕ್ಕೆ ರಾಷ್ಟ್ರಪತಿಯವರಿಂ ಅನುಮತಿ ಇನ್ನೂ ಸಿಕ್ಕಿಲ್ಲ. ಮುಖ್ಯವಾಗಿ ಕಾರ್ಪೊರೇಷನ್ಸ್, ಏರಿಯಾದಲ್ಲಿ ಮತ್ತು ಮುನಿಸಿಪಲ್ ಏರಿಯಾಗಳಲ್ಲಿ ಪ್ರಚಾರಗಳನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ವಿಧಾನಸೌಧ ಹಾಗೂ ಇತರೇ ಸರ್ಕಾರೀ ಕಟ್ಟಡಗಳನ್ನು ಚೆನ್ನಾಗಿ ಇಟ್ಟುಕೊಳ್ಳ ಬೇಕೆಂಬ ಉದ್ದೇಶದಿಂದ ಈ ಕಾಯಿದೆಯನ್ನು ಜಾರಿಗೆ ತಂದಿದ್ದು. ಈ ಕಾಯಿದೆ ಪ್ರಕಾರ ಭಿತ್ತಿ ಪತ್ರ ಗಳನ್ನು ಅಂಟಿಸುವವರು ಎಲ್ಲೆಲ್ಲಿ ಅಂಟಿಸಬೇಕೆಂಬ ಬಗ್ಗೆ ಕಾರ್ಪೊರೇಷನ್ ಇಲ್ಲವೇ ಆಯಾ ಮುನಿಸಿ ಪಾಲಿಟಿಗಳ ಅನುಮತಿ ಪಡೆಯಬೇಕಾಗುತ್ತದೆ.

ಶ್ರೀ. ಕೆ. ರಾಮಭಟ್.--ಜನರಿಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವವರೆಗೆ ನಾವು ಸಹಿಸುತ್ತೆ ವೆಂದು ಹೇಳಿದಿರಿ. ಅಂದರೆ ಎಷ್ಟು ಸಮಯದವರೆಗೆ ಸಹಿಸುತ್ತೀರಿ ಮತ್ತು ಎಲ್ಲಿಯವರೆಗೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ನಿರ್ಣಯ ಮಾಡಿದ್ದೀರಿ? ಇಲ್ಲಿಯವರೆಗೆ ಈ ಸಂಬಂಧದಲ್ಲಿ ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ?

ಶ್ರೀ ಧರ್ಮಸಿಂಗ್.--ಯೂತ್ ಕಾಂಗ್ರೆಸ್‌ನವರಾಗಲೀ ಬೇರೆ ಯಾರೇ ಆಗಲಿ, ಕಾರ್ಪೊರೇಷನ್ ಬೈಲಾ ಪ್ರಕಾರ ದುಡ್ಡು ಕಟ್ಟಿ ಅವರ ಅನುಮತಿ ಪಡೆದು ಭಿತ್ತಿ ಪತ್ರಗಳನ್ನು ಹಚ್ಚಬೇಕಾಗುತ್ತದೆ. ಕೆಲವೊಂದು ಸಂಘ ಸಂಸ್ಥೆಗಳು ಈ ರೀತಿ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಇನ್‌ವೆಸ್ಟಿ ಗೇಷನ್ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟ ಬಿಲ್ ಪಾಸಾಗಿ ಬಂದ ಮೇಲೆ ತಾವು ರೂಲ್ಸ್ ಫ್ರೇಮ್ ಮಾಡುತ್ತೇವೆ. ಆಗ ಇದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

Lock-out by Senapathy whitley Co.,

838 SRI PAMPAPATHI(Davanagere).—Will the Minister for Labour be pleased to state.—

(a) whether it has come to the notice of Government that the High Court of Karnataka has struck down and directed to reconsider the decision of the Government in not considering the lock-out declared on 22-12-80 (for the last 13 months) by the Senapathy Whitley Factory Ramanagaram as illegal even after lapse of two months of the decision of the High Court ;

(b) though Government took action to declare lock-outs within a period of two months in respect of M/s Bharuka Textiles and Bangalore Metal Products factory as illegal even though the demands of the labourers were genuine, why action has not been taken even after three months of the lock-out declared by the Senapathy Whitley